3–ಆಕ್ಸಲ್ ಮರ್ಸಿಡಿಸ್ ಬೆನ್ಜ್ ವೋಲ್ವೋ ಹವಾ ನಿಯಂತ್ರಣ ಬಸ್ ಸಂಚಾರ

3855(4143); ಶ್ರೀ ಮಕಬೂಲ್ ಎಸ್.ಬಾಗವಾನ್ (ಬಿಜಾಪುರ ನಗರ)

ಅ) ವಿಜಾಪುರದಿಂದ ಬೆಂಗಳೂರಿಗೆ ಸಂಚರಿಸುತ್ತಿರುವ 3 ಆಕ್ಸಲ್ ಮರ್ಸಿಡಿಸ್ ಬೆಂಜ್ ವೋಲ್ವೋ ಹವಾ ನಿಯಂತ್ರಣ ಬಸ್ ಸಂಚಾರ ರದ್ದು ಮಾಡಿರುವುದರಿಂದ ಸಾರ್ವಜನಿಕರಿಗೆ ಸಂಚರಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿಜಾಪುದಿಂದ ಬೆಂಗಳೂರಿಗೆ ಸಂಚರಿಸುವ ಸಲುವಾಗಿ ರೈಲ್ವೆ ವ್ಯವಸ್ಥೆ ಇಲ್ಲದ ಪ್ರಯುಕ್ತ ಸಾರ್ವಜನಿಕರಿಗೆ ತೊಂದರೆಯಾಗಿದೆ; ಖಾಸಗಿ ಬಸ್‌ಗಳಲ್ಲಿ ಸಂಚರಿಸುತ್ತಿರುವುದು ಗೊತ್ತಿದ್ದರೂ 3 ಆಕ್ಸಲ್ ಮರ್ಸಿಡಿಸ್ ಬೆಂಜ್ ವೋಲ್ವೋ ಹವಾನಿಯಂತ್ರಿತ ಬಸ್ಸನ್ನು ಯಾವ ಕಾರಣಕ್ಕೆ ರದ್ದುಗೊಳಿಸಲಾಗಿದೆ;

ಇ) ಹಾಗಿದ್ದರೂ ಸಹ ಪುನಃ ಸಂಚಾರ ಪ್ರಾರಂಭಿಸಲು ಯಾವ ಕ್ರಮ ಕೈಗೊಳ್ಳಲಾಗುವುದು; ಪ್ರಸ್ತುತ ತಿಂಗಳಂತ್ಯದಲ್ಲಿ ಇದರ ಪ್ರಚಾರ ಪ್ರಾರಂಭಿಸಿ ವಿಜಾಪುರ ಜಿಲ್ಲೆಯ ಸಾರ್ವಜನಿಕರಿಗೆ ಇದರ ಅನುಕೂಲ ಮಾಡಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಬೆಂಗಳೂರು ವಿಜಾಪುರ ನಡುವೆ ಇದುವರೆಗೂ 3 ಆಕ್ಸಲ್ ಮರ್ಸಿಡಿಸ್ ಬೆಂಜ್ ಹವಾನಿಯಂತ್ರಿತ ಬಸ್ ಸಂಚಾರವನ್ನು ಕಾರ್ಯಾಚರಣೆ ಮಾಡಿರುವುದಿಲ್ಲ.

ಆ) 2 ಆಕ್ಸಲ್ ಮರ್ಸಿಡಿಸ್ ವೋಲ್ವೋ ಹವಾ ನಿಯಂತ್ರಿತ ಸಾರಿಗೆಯನ್ನು ದಿನಾಂಕ 9/12/2005ರಿಂದ 8/12/2008 ವರೆಗೆ ಕಾರ್ಯಾಚರಣೆ ಮಾಡಲಾಗಿದ್ದು, ಸದರಿ ಸಾರಿಗೆಯು ಸತತವಾಗಿ ನಷ್ಟದಲ್ಲಿ ಕಾರ್ಯಾಚರಣೆಯಾಗುತ್ತಿದ್ದರಿಂದ ದಿನಾಂಕ: 8/12/2008ರಂದು ರದ್ದುಪಡಿಸಲಾಗಿರುತ್ತದೆ.

ಬೆಂಗಳೂರು–ವಿಜಾಪುರ ನಡುವೆ ಆಚರಣೆ ಮಾಡುತ್ತಿದ್ದ ವೋಲ್ವೋ ನಿಯಂತ್ರಿತ ಸಾರಿಗೆಗೆ ಸಾರ್ವಜನಿಕ ಪ್ರಯಾಣಿಕರಿಂದ ಉತ್ತೇಜನ ದೊರೆಯದೇ ಸತತವಾಗಿ ನಷ್ಟ ಅನುಭವಿಸಿದ್ದರಿಂದ ನವೆಂಬರ್–12 ರಲ್ಲಿ ರದ್ದುಪಡಿಸಲಾಗಿದೆ.

ಬೆಂಗಳೂರು ಬಿಜಾಪುರ ನಡುವೆ ಒಂದು ದುಂಡುಸುತ್ತುವಳಿಯ ನಾನ್ ಎಸಿ ಸ್ಲೀಪರ್ ಸಾರಿಗೆಯನ್ನು ನಷ್ಟದಲ್ಲಿದ್ದರೂ ಸಹ ಸಾರ್ವಜನಿಕ ಹಿತದೃಷ್ಟಿಯಿಂದ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಬಿಜಾಪುರ–ಬೆಂಗಳೂರು ನಡುವೆ ಪ್ರಯಾಣಿಸುವ ಪ್ರಯಾಣಿಕರು ಸದರಿ ಸಾರಿಗೆಯ ಸದುಪಯೋಗವನ್ನು ಪಡೆಯುತ್ತಿರುತ್ತಾರೆ.

ಇ) ಪುನಃ ಪ್ರಾರಂಭಿಸುವ ಯಾವುದೇ ಯೋಜನೆ ಇರುವುದಿಲ್ಲ.

1951 ಹೊಸ ವಾಹನಗಳು

3856(4144); ಶ್ರೀ ಮಕಬುಲ್ ಎಸ್. ಬಾಗವಾನ್ (ಬಿಜಾಪುರ ನಗರ)

ಅ) 2013–14ನೇ ಸಾಲಿನಲ್ಲಿ ಎಲ್ಲಾ ಸಾರಿಗೆ ನಿಗಮಗಳೂ ಸೇರಿ 1951 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಲಾಗಿದೆಯೆಂದು ಆಯವ್ಯಯದಲ್ಲಿ ಹೇಳಿದ್ದು ಅದರಂತೆ ವಿಜಾಪುರ ವಿಭಾಗಕ್ಕೆ ಎಷ್ಟು ವಾಹನಗಳನ್ನು ಸೇರ್ಪಡೆಗೊಳಿಸಲಾಗಿದೆ;

ಆ) 2014–15ರಲ್ಲಿ ಸಾರಿಗೆ ನಿಗಮಗಳು ತಮ್ಮ ಸ್ವಂತ ಸಂಪನ್ಮೂಲದಲ್ಲಿ 3982 ಹೊಸ ವಾಹನಗಳು ಮತ್ತು 28 ಬಸ್ ಡಿಪೋಗಳು ಮತ್ತು ಹೊಸ ಬಸ್ ನಿಲ್ದಾಣಗಳು ಸೇರ್ಪಡೆ ಮಾಡಲಿವೆ ಎಂದು ಆಯವ್ಯಯದಲ್ಲಿ ಘೋಷಿಸಿದಂತೆ ವಿಜಾಪುರ ಜಿಲ್ಲೆಗೆ ಎಷ್ಟು ವಾಹನಗಳು ಹಾಗೂ ಎಷ್ಟು ಡಿಪೋಗಳು ಮತ್ತು ಹೊಸ ಬಸ್ ನಿಲ್ದಾಣಗಳನ್ನು ಮಂಜೂರು ಮಾಡಲಾಗಿರುತ್ತದೆ;

ಇ) ವಿಜಾಪುರ ವಿಭಾಗ ಪ್ರಾರಂಭವಾದ ವರ್ಷದಿಂದ ಇಲ್ಲಿಯವರೆಗೆ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಬಿಡುಗಡೆಯಾದ